ಓ ಎಸ್ ನಂ. 60/2021

ಡಿ ಡಬ್ಲ್ಯು 1

ದಿನಾಂಕ 04/02/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರಃ ಶ್ರೀ ಹೆಚ್ ಎನ್ ಎಸ್ ವಕೀಲರಿಂದಃ

ಪ್ರಸ್ತುತ ದಾವೆಯನ್ನು ಯಾರು ಯಾರ ವಿರುದ್ಧ ಹೂಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಯಾವ ವಿಚಾರಕ್ಕೆ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ಆಸ್ತಿಯಲ್ಲಿ ಪಾಲು ಕೇಳಿ ದಾವೆ ಹೂಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆಯಲ್ಲಿ ಯಾವ ಯಾವ ಸ್ವತ್ತುಗಳು ಇರುತ್ತವೆ ಎಂಬುದರ ಬಗ್ಗೆ ನನಗೆ ತಿಳಿದಿರುತ್ತದೆ. ಬೆಂಗಳೂರು ಮತ್ತು ಬೀರೂರಿನ ಸ್ವತ್ತುಗಳ ಮೇಲೆ ದಾವೆ ಹೂಡಲಾಗಿರುತ್ತದೆ. ದಾವಾ ಆಸ್ತಿಗಳೆಲ್ಲವೂ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸಾಕ್ಷಿ ದಾವಾ ಬಿ ಷೆಡ್ಯೂಲ್ ಬೀರೂರಿನ ಸ್ವತ್ತು ಒಟ್ಟು ಕುಟುಂಬದ ಆಸ್ತಿಯಾಗಿದ್ದು ದಾವಾ ಎ ಷೆಡ್ಯೂಲ್ ಬೆಂಗಳೂರಿನ ಆಸ್ತಿಯನ್ನು ನಾನು ಗಳಿಸಿರುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ಒಟ್ಟು ಕುಟುಂಬದ ಆಸ್ತಿಗಳು ಇನ್ನೂ ವಿಭಾಗವಾಗಿಲ್ಲ ಜಂಟಿಯಲ್ಲಿರುತ್ತವೆ ಎಂದರೆ ಸರಿ. 1 ನೇ ಪ್ರತಿವಾದಿ ಎಂ ಎಲ್ ಮಂಜುನಾಥರವರು ನನ್ನ ತಂದೆಯಾಗಿರುತ್ತಾರೆ. ಪ್ರಸ್ತುತ ದಾವೆಯ ವಾದಿ ನನ್ನ ತಂದೆಯ ಸಹೋದರ ಆಗಿರುತ್ತಾರೆ ಎಂದರೆ ಸರಿ. ದಾವಾ ಐಟಂ ನಂ.2 ರ ಸ್ವತ್ತು ನನ್ನ ಅಜ್ಜನ ಎಂ ವಿ ಲಕ್ಷ್ಮೀನಾರಾಯಣರವರ ಆಸ್ತಿ ಎಂದರೆ ಸರಿ. ಅವರು 1973 ರಲ್ಲಿ

ಮೃತಪಟ್ಟಿತ್ತಾರೆ ಎಂದರೆ ಸರಿ. ಅವರು ಮೃತಪಟ್ಟ ನಂತರ ಬೀರೂರಿನ ವ್ಯವಹಾರಗಳನ್ನು ನನ್ನ ತಂದೆಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸುಳ್ಳು. ನನ್ನ ಅಜ್ಜನ ಮರಣ ಹೊಂದಿದ ನಂತರ ವಾದಿ ಕೃಷ್ಣಮೂರ್ತಿ ಮತ್ತು 5 ನೇ ಪ್ರತಿವಾದಿ ರಾಮಚಂದ್ರರವರು ವಿದ್ಯಾಭ್ಯಾಸಕ್ಕೆಂದು ಬೆಂಗಳೂರಿಗೆ ಹೋಗಿರುತ್ತಾರೆ ಎಂದರೆ ಸಾಕ್ಷಿ ವಾದಿ ಕೃಷ್ಣಮೂರ್ತಿರವರು ವಿದ್ಯಾಭ್ಯಾಸಕ್ಕೆಂದು ಬೆಂಗಳೂರಿಗೆ ಹೋಗಿದ್ದು, 5 ನೇ ಪ್ರತಿವಾದಿ ಅವರ ವಿದ್ಯಾಭ್ಯಾಸವನ್ನು ಶಿವಮೊಗ್ಗದಲ್ಲಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ವಾದಿ ಮತ್ತು 5 ನೇ ಪ್ರತಿವಾದಿ ವಿದ್ಯಾಭ್ಯಾಸಕ್ಕೆ ಹೋದಾಗ ಬೀರೂರಿನ ವ್ಯವಹಾರಗಳನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವ್ಯವಹಾರಗಳನ್ನು ಎಂ ಎಸ್ ಶ್ರೀನಿವಾಸ್ ಮೂರ್ತಿರವರು ನೋಡಿಕೊಳ್ಳುತ್ತಿದ್ದರು, ನನ್ನ ತಂದೆ ಅವರಿಗೆ ಸಹಾಯಕರಾಗಿದ್ದರು ಎಂದು ನುಡಿಯುತ್ತಾರೆ. ಸದರಿ ಎಂ ಎಸ್ ಶ್ರೀನಿವಾಸ್ ಮೂರ್ತಿರವರು 2007 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ಅವರು ನನಗೆ ದೊಡ್ಡಪ್ಪನಾಗಬೇಕು ಎಂದರೆ ಸರಿ. ನನ್ನ ದೊಡ್ಡಪ್ಪ ಮೃತಪಟ್ಟ ನಂತರ ಬೀರೂರಿನ ವ್ಯವಹಾರಗಳನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 4 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ದಾವಾ ಬಿ ಷೆಡ್ಯೂಲ್ ಸ್ವತ್ತಿನಲ್ಲಿ ನಮಗೆ ಸೇರಿದ

ಒಂದು ಹೋಟೇಲ್ ಇತ್ತು ಎಂದರೆ ಸರಿ. ಸದರಿ ಹೋಟೇಲನ್ನು ಹೊರತು ಪಡಿಸಿ ಆ ಕಟ್ಟಡದಲ್ಲಿ ಬಾಡಿಗೆ ಬರುವಂತಹ ಅಂಗಡಿ ಮಳಿಗೆ ಮತ್ತು ಲಾಡ್ಜ ಇದ್ದವು ಎಂದರೆ ಸರಿ. 2007 ರಲ್ಲಿ ನನ್ನ ದೊಡ್ಡಪ್ಪ ಮೃತಪಟ್ಟ ನಂತರ ಸದರಿ ಅಂಗಡಿ ಮಳಿಗೆಗಳಿಂದ ಮತ್ತು ಲಾಡ್ಜನಿಂದ ಬರುತ್ತಿದ್ದ ಬಾಡಿಗೆಯನ್ನು ನನ್ನ ತಂದೆ ಪಡೆಯುತ್ತಿದ್ದರು ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು 4 ನೇ ಪ್ರತಿವಾದಿ ಪಡೆಯುತ್ತಿದ್ದರು ಎಂದು ನುಡಿಯುತ್ತಾರೆ. ನಮಗೆ ಸೇರಿದ ಹೋಟೇಲ್ 2012 ರಲ್ಲಿ ಮುಚ್ಚಿರುತ್ತದೆ ಎಂದರೆ ಸರಿ. ಆನಂತರದಲ್ಲಿ ಸದರಿ ಹೋಟೇಲಿನ ಜಾಗವನ್ನು ಸಹ ಬಾಡಿಗೆ ನೀಡಲಾಗಿತ್ತು ಎಂದರೆ ಸರಿ. ಸದರಿ ಹೋಟೇಲ್ ಜಾಗದ ಬಾಡಿಗೆಯನ್ನು ಸಹ ನನ್ನ ತಂದೆ ಪಡೆಯುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 4 ನೇ ಪ್ರತಿವಾದಿ ಪಡೆಯುತ್ತಿದ್ದರು ಎಂದು ನುಡಿಯುತ್ತಾರೆ.

ನಾನು 06/05/1985 ರಲ್ಲಿ ಜನಿಸಿರುತ್ತೇನೆ. ನನ್ನ ಎಸ್ ಎಸ್ ಎಲ್ ಸಿ ವಿದ್ಯಾಭ್ಯಾಸ ಬೀರೂರಿನಲ್ಲಿ ಆಗಿದ್ದು, ಪಿಯುಸಿ ಮತ್ತು ಬಿಕಾಂ ವಿದ್ಯಾಭ್ಯಾಸವನ್ನು ಶಿವಮೊಗ್ಗದಲ್ಲಿ ಮಾಡಿರುತ್ತೇನೆ ಎಂದರೆ ಸರಿ. ನಾನು ಸೂಳ್ಯದಲ್ಲಿ ಎಂ ಬಿ ಎ ವ್ಯಾಸಂಗ ಮಾಡಿರುತ್ತೇನೆ ಎಂದರೆ ಸರಿ. ನನ್ನ ಎಂ ಬಿ ಎ ವ್ಯಾಸಂಗ 2007 ರಲ್ಲಿ ಮುಗಿದಿರುತ್ತದೆ. ಆನಂತರ ನಾನು 29/10/2007 ರಂದು ಕೆಂಬ್ರಿಡ್ಜ ಸಲ್ಯೂಷನ್ ಲಿಮಿಟೆಡ್ ನಲ್ಲಿ ಉದ್ಯೋಗಕ್ಕೆ ಸೇರಿರುತ್ತೇನೆ. ಅಲ್ಲಿ

ಸುಮಾರು ಮೂರೂವರೆ ವರ್ಷಗಳ ಕಾಲ ನಾನು ಕೆಲಸ ಮಾಡಿರುತ್ತೇನೆ. ಆ ಸಮಯದಲ್ಲಿ ನನಗೆ ಸುಮಾರು 14 ಸಾವಿರ ರೂ ಮಾಸಿಕ ವೇತನ ಬರುತ್ತಿತ್ತು. ಆ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ವೇತನ ಹೆಚ್ಚಾದ ಬಗ್ಗೆ ಮತ್ತು ಬ್ರೇಕಪ್ ಗಳ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನಾನು ವಿದ್ಯಾಭ್ಯಾಸಕ್ಕೆಂದು ಲೋನ್ ಪಡೆದಿದ್ದೆ ಎಂದರೆ ಸುಳ್ಳು. ಕೆಂಬ್ರಿಡ್ಜ ಸಲ್ಯೂಷನ್ ಲಿಮಿಟೆಡ್ ನಲ್ಲಿ ಕೆಲಸ ಬಿಟ್ಟ ನಂತರ ಹೈದರಾಬಾದ್ ವೆಲ್ಸ ಬಾಗೋರ್ ಇಂಡಿಯಾ ಲಿಮಿಟೆಡ್ ಕಂಪನಿಯಲ್ಲಿ ಕೆಲಸಕ್ಕೆ ಸೇರಿರುತ್ತೇನೆ. ಸದರಿ ಸಂಸ್ಥೆಯಲ್ಲಿ ನಾನು ಕೆಲಸಕ್ಕೆ ಸೇರಿದ ಬಗ್ಗೆ ಜಾಬ್ ಆಪರ್ ಲೆಟರ್, ಸ್ಯಾಲರಿ ಪ್ಯಾಕೇಜ್ ಮತ್ತು ಸ್ಯಾಲರಿ ಬ್ರೇಕ್ ಅಪ್ ಗಳ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಕಂಪನಿಯ ಆಪರ್ ಲೆಟರ್ ಮತ್ತು ಇನ್ ಕಮ್ ಟ್ಯಾಕ್ಸ ಡಿಟೇಲ್ ಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ಮದ್ಯಾಹ್ನ 3-00 ಗಂಟೆಗೆ ಮುಂದೂಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.

ದಿನಾಂಕ 04/02/2026 ರಂದು ಪುನಃ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರಃ ಶ್ರೀ ಹೆಚ್ ಎನ್ ಎಸ್ ವಕೀಲರಿಂದಃ

ನಿಡಿ-2 ರ ದಾಖಲೆ ನಾನು ಕೆಂಬ್ರಿಕ್ಡ್ ಸಲ್ಯೂಷನ್ ನಲ್ಲಿ ಕೆಲಸ ನಿರ್ವಹಿಸಿದ ಬಗ್ಗೆ ದಾಖಲೆ ಎಂದರೆ ಸರಿ. ಅಕ್ಟೋಬರ್ 2007 ರಲ್ಲಿ ನಾನು ಟ್ರೈನಿಯಾಗಿ ಕೆಲಸಕ್ಕೆ ಸೇರಿರುತ್ತೇನೆ ಎಂದರೆ ಸರಿ. ಮಾಸಿಕ 8 ಸಾವಿರ ರೂಗಳಿಗೆ ನಾನು ನವೆಂಬರ್ ಮತ್ತು ಡಿಸೆಂಬರ್ 2007 ರಲ್ಲಿ ಎರಡು ತಿಂಗಳುಗಳ ಕಾಲ ಕೆಲಸ ಮಾಡಿರುತ್ತೇನೆ ಎಂದರೆ ಸರಿ. ಎರಡು ತಿಂಗಳ ಒಟ್ಟು ಸಂಬಳ ನನಗೆ 16 ಸಾವಿರ ರೂ ಆಗುತ್ತದೆ ಎಂದರೆ ಸರಿ. ಜನವರಿ 2008 ರಿಂದ ನನಗೆ ಖಾಯಂ ಆಗಿ ಕೆಲಸಕ್ಕೆ ತೆಗೆದುಕೊಂಡಿದ್ದು ಮಾಸಿಕ 9024 ರೂ ಸಂಬಳ ಬರುತ್ತಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು 6 ತಿಂಗಳುಗಳ ಕಾಲ ನಾನು ಪ್ರೊಬೇಷನರಿಯಲ್ಲಿದ್ದೆ ಎಂದು ನುಡಿಯುತ್ತಾರೆ. ಜನವರಿ 2008 ರಿಂದ ಜುಲೈ 2008 ರವರೆಗೆ ನಾನು ಒಟ್ಟು 63 ಸಾವಿರ ರೂ ಸಂಬಳ ಪಡೆದಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದರ ಜತೆ ಇನಿಕ್ರಿಮೆಂಟ್ ಸಹ ಜಮೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಜನವರಿ 2008 ರಿಂದ ಜುಲೈ 2008 ರವರೆಗೆ ನನಗೆ ಯಾವುದೇ ರೀತಿಯ ಇನ್ಕ್ರಿಮೆಂಟ್ ಆಗಿರುವುದಿಲ್ಲ ಎಂದರೆ ಸರಿ. ಆಗಸ್ಟ್ 2008 ರಿಂದ ನನಗೆ ಸ್ಯಾಲರಿ ಹೈಕಾಗಿ 9993 ರೂ ಮಾಸಿಕ ವೇತನ ಬರುತ್ತಿತ್ತು ಎಂದರೆ ಸರಿ. ಮೇಲ್ಕಂಡ ಸಂಬಳಕ್ಕೆ ನಾನು ಸುಮಾರು

30 ತಿಂಗಳುಗಳ ಕಾಲ ಕೆಲಸ ಮಾಡಿರುತ್ತೇನೆ ಎಂದರೆ ಸಾಕ್ಷಿ ವರ್ಷಕ್ಕೊಮ್ಮೆ ನನ್ನ ಸಂಬಳಕ್ಕೆ ಇನ್ಕ್ರಿಮೆಂಟ್ ಸೇರುತ್ತದೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ವೇತನ ಪ್ರಮಾಣ ಪತ್ರದ ಪ್ರಕಾರ 30 ತಿಂಗಳಿಗೆ ನಾನು 2,99,790 ರೂ ಪಡೆದಿರುತ್ತೇನೆ ಎಂದರೆ ಸಾಕ್ಷಿ ನಾನು ಮೇಲ್ಕಂಡ ಸಂಬಳದೊಂದಿಗೆ ವಾರ್ಷಿಕ ಇನ್ಕ್ರಿಮೆಂಟ್ ಸಹ ಪಡೆದಿದ್ದು ಅದು ನನ್ನ ವೇತನ ಪ್ರಮಾಣ ಪತ್ರದಲ್ಲಿ ನಮೂದಾಗಿಲ್ಲ ಎಂದು ನುಡಿಯುತ್ತಾರೆ. ನಾನು ಜನವರಿ 2011 ರವರೆಗೆ ಸದರಿ ಕೆಂಬ್ರಿಡ್ಜ್ ಕಂಪನಿಯಲ್ಲಿ ಕೆಲಸ ಮಾಡಿರುತ್ತೇನೆ ಎಂದರೆ ಸರಿ. ಕೆಂಬ್ರಿಡ್ಜ್ ಸಲ್ಯೂಷನ್ ಕಂಪನಿಯಲ್ಲಿ ಕೆಲಸ ಮಾಡಿದ ಬಾಬ್ತು ನಾನು  3,78,958 ರೂ ಪಡೆದಿರುತ್ತೇನೆ ಎಂದರೆ ಸಾಕ್ಷಿ ಹೌದು ಮೇಲ್ಕಂಡ ಮೊತ್ತಕ್ಕೆ ಇನ್ಕ್ರಿಮೆಂಟ್ ಸಹ ಸೇರಬೇಕು ಎಂದು ನುಡಿಯುತ್ತಾರೆ. ಇನ್ಕ್ರಿಮೆಂಟ್ ಇಂತಿಷ್ಟು ಬಂದಿರುತ್ತದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ನಾನು ವೆಲ್ಸ್ ಪಾರ್ಗೊ ಸಂಸ್ಥೆಯಲ್ಲಿ ಕೆಲಸ ಮಾಡಿದ ಬಗ್ಗೆ ನಿಡಿ-4 ರ ದಾಖಲೆಯನ್ನು ಹೊರತು ಪಡಿಸಿ ಸಂಬಳದ ಬಗ್ಗೆ ಇತರೇ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಸದರಿ ನಿಡಿ-4 ರ ದಾಖಲೆ ರಿಲೀವಿಂಗ್ ಸರ್ಟಿಪಿಕೇಟಾಗಿದ್ದು ಅದರಲ್ಲಿ ನಾನು ಎಲ್ಲಿಂದ ಎಲ್ಲಿವರೆಗೆ ಆ ಸಂಸ್ಥೆಯಲ್ಲಿ ಕೆಲಸ ಮಾಡಿದ್ದೇನೆ ಎಂದು ನಮೂದಿದೆ ಎಂದು ನುಡಿಯುತ್ತಾರೆ. ನಿಡಿ-5 ರ ಸೆಟಲ್ಮೆಂಟ್

ಲೆಟರ್ 19 ಮೇ 2017 ರದ್ದು ಎಂದರೆ ಸರಿ. ಮೇ 2017 ರಲ್ಲಿ ನನ್ನ ಸಂಬಳ 99,092 ರೂ ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನಿಡಿ-5 ರ ದಾಖಲೆ ಈ ಕೇಸಿಗೆ ಸಂಬಂದಪಟ್ಟದ್ದಲ್ಲ ಎಂದರೆ ಸಾಕ್ಷಿ ನನ್ನ ಆದಾಯವನ್ನು ರುಜುವಾತುಪಡಿಸಲು ಹಾಜರುಪಡಿಸಿರುವ ದಾಖಲೆ ಎಂದು ನುಡಿಯುತ್ತಾರೆ. ನಾನು ಆನಂತರ 2017 ರಲ್ಲಿ ಆಲ್ಟಿ ಸೋರ್ಸ್ ಎಂಬ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿರುತ್ತೇನೆ. ಆನಂತರದಲ್ಲಿ ರಾಕೇಶ್ ಸಿ ಆರ್ ಅಂಡ್ ಕೋ ಸಂಸ್ಥೆಯಲ್ಲಿ ಕೆಲಸ ಮಾಡಿರುತ್ತೇನೆ. ನಿಡಿ-6 ರ ದಾಖಲೆ 2017 ಕ್ಕೆ ಸಂಬಂದಪಟ್ಟದ್ದು ಮತ್ತು ನಿಡಿ-7 ರ ದಾಖಲೆ 2019 ಕ್ಕೆ ಸಂಬಂದಪಟ್ಟದ್ದು ಎಂದರೆ ಸರಿ. ನಿಡಿ-5 ರಿಂದ 7 ರ ದಾಖಲೆಗಳನ್ನು ತಪ್ಪು ದಾರಿಗೆಳೆಯಲು ಹಾಜರುಪಡಿಸಿರುತ್ತೇನೆ ಎಂದರೆ ಸಾಕ್ಷಿ ಸದರಿ ದಾಖಲೆಗಳು ನಾನು ಕೆಲಸ ನಿರ್ವಹಿಸಿದ ಬಗ್ಗೆ ಮತ್ತು ಸಂಬಳ ಪಡೆದ ಬಗ್ಗೆ ರುಜುವಾತು ಪಡಿಸಲು ಸಲ್ಲಿಸಿರುವ ದಾಖಲೆಗಳು ಎಂದು ನುಡಿಯುತ್ತಾರೆ. ಆಲ್ಟಿ ಸೋರ್ಸ್ ಮತ್ತು ರಾಜೇಶ್ ಸಿ ಆರ್ ಅಂಡ್ ಕೋಂ ಕಂಪನಿಗಳಲ್ಲಿ ವೇತನ ಪಡೆದ ಬಗ್ಗೆ ದಾಖಲಾತಿಗಳನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಸಂಬಂದಪಟ್ಟ ಐಟಿ ರಿಟರ್ನ್ಸ್ ಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ-8 ರಡಿಯಲ್ಲಿ ನಾನು ಸಲ್ಲಿಸಿರುವಂತಹ ಐಟಿ ರಿಟರ್ನ್ಸ್ ಅಕನಾಲ್ಜೆಮೆಂಟ್ ಗಳು 2016-17 ರಿಂದ 2020-21 ರವರೆಗಿನ ದಾಖಲೆಗಳು ಎಂದರೆ ಸರಿ. 2007 ರಿಂದ 2015 ರವರೆಗೆ ನಾನು ಆದಾಯ ತೆರಿಗೆ ಪಾವತಿದಾರನಾಗಿರಲಿಲ್ಲ ಎಂದರೆ ಸಾಕ್ಷಿ

2007 ರಿಂದ 2014 ರವರೆಗೆ ನನಗೆ ಆದಾಯ ತೆರಿಗೆ ಪಾವತಿ ಮಾಡುವ ಬಾದ್ಯತೆ ಇರಲಿಲ್ಲ ಆದರೆ ನಾನು 2014-15 ರ ನಂತರದಲ್ಲಿ ಟ್ಯಾಕ್ಸ ಸ್ಲ್ಯಾಬ್ ಗೆ ಒಳಪಟ್ಟಿದ್ದರಿಂದ ಆನಂತರದಲ್ಲಿ ನಾನು ಆದಾಯ ತೆರಿಗೆ ಪಾವತಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ-8 ರಡಿಯಲ್ಲಿ ಹಾಜರುಪಡಿಸಿರುವ ದಾಖಲೆಗಳಿಗೂ ಈ ಕೇಸಿಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಿಡಿ-9 ರ ದಾಖಲೆಯು ಸಹ ಈ ದಾವೆಗೆ ಸಂಬಂಧಿಸಿದ್ದಲ್ಲ ಎಂದರೆ ಸಾಕ್ಷಿ ದಾವಾ ಷೆಡ್ಯೂಲ್ ಐಟಂ ನಂ.1 ರ ಸ್ವತ್ತನ್ನು ಖರೀದಿಸುವಾಗ ನಾನು ಎಲ್ ಐ ಸಿ ಯಿಂದ ಸಾಲ ಪಡೆದ ಬಗ್ಗೆ ರುಜುವಾತು ಪಡಿಸಲು ಆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ-11 ರ ದಾಖಲೆಯನ್ನು ನನ್ನ ಸಂಬಂಧಿಕರು ನನ್ನ ಖಾತೆಗೆ ಹಣ ಜಮೆ ಮಾಡಿರುವ ಬಗ್ಗೆ ರುಜುವಾತುಪಡಿಸಲು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ದಾಖಲೆ ನಾನು ನನ್ನ ತಂದೆ ಹೆಸರಿನಲ್ಲಿ ಮ್ಯುಚುವಲ್ ಫಂಡ್ ನಲ್ಲಿ ಕೊಟಾಕ್ ಮಹೀಂದ್ರ ಇನ್ವೆಸ್ಟ ಗೆ ನನ್ನ ಖಾತೆಯಿಂದ ಹಣ ಜಮೆ ಮಾಡಿದ ಬಗ್ಗೆ ರುಜವಾತು ಪಡಿಸಲು ಹಾಜರುಪಡಿಸಿರುವುದು ಎಂದು ನುಡಿಯುತ್ತಾರೆ. ಸದರಿ ಬ್ಯಾಂಕ್ ಖಾತೆ ಪ್ರಕಾರ ನನ್ನ ಚಿಕ್ಕಪ್ಪ ಚಂದ್ರಶೇಖರ್ ರವರು ಒಟ್ಟು 57 ಸಾವಿರ ರೂಗಳನ್ನು 2011-12 ನೇ ಇಸವಿಯಲ್ಲಿ ಜಮೆ ಮಾಡಿರುತ್ತಾರೆ ಎಂದರೆ ಸುಳ್ಳು. ಅದೇರೀತಿ ನನ್ನ ಅಕ್ಕನ ಗಂಡ ಸಂಜಯ್ ರಾವ್ ರವರ ಖಾತೆಯಿಂದ ಒಟ್ಟು 17,500

ರೂಗಳನ್ನು ನಾನು ವಿತ್ ಡ್ರಾ ಮಾಡಿರುತ್ತೇನೆ ಎಂದರೆ ಸುಳ್ಳು. ನಾನು ನಿಡಿ-11 ರ ಪ್ರಕಾರ 43 ಸಾವಿರ ರೂಗಳನ್ನು ವಿತ್ ಡ್ರಾ ಮಾಡಿರುತ್ತೇನೆ ಎಂದರೆ ಸಾಕ್ಷಿ ನನ್ನ ಖಾತೆಯಿಂದ ನಾನು ಎ ಟಿ ಎಂ ಮೂಲಕ ಹಣ ತೆಗೆದಿರುತ್ತೇನೆ ಎಂದು ನುಡಿಯುತ್ತಾರೆ.  ಅದೇರೀತಿ ಹೆಚ್ ಡಿ ಎಫ್ ಸಿ ಬ್ಯಾಂಕಿನಿಂದ 29 ಸಾವಿರ ರೂ ವಿತ್ ಡ್ರಾ ಮಾಡಿರುತ್ತೇನೆ ಎಂದರೆ ಸಾಕ್ಷಿ ನನ್ನ ಖಾತೆಯಿಂದ ನಾನು ಎ ಟಿ ಎಂ ಮೂಲಕ ಹಣ ತೆಗೆದಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಸದರಿ ಹಣವನ್ನು ಮ್ಯುಚುವಲ್ ಪಂಡ್ ನಲ್ಲಿ ಇನ್ವೆಸ್ಟ್ ಮಾಡಿದ ಬಗ್ಗೆ ಇಸಿಎಸ್ ನಂತೆ ಆಟೋಡೆಬಿಟ್ ಆಗಿರುವ ಹಣ ಎಂದು ನುಡಿಯುತ್ತಾರೆ. ನಿಡಿ-11 ರ ದಾಖಲೆಯನ್ನು ಯಾವ ಕಾರಣಕ್ಕೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸಾಕ್ಷಿ ನನ್ನ  ಆಕ್ಸಿಸ್ ಬ್ಯಾಂಕ್ ಖಾತೆಯಲ್ಲಿ ನನ್ನ ತಂದೆ ಹೆಸರಿನಲ್ಲಿ ಮ್ಯುಚುವಲ್  ಪಂಡ್ ಗೆ ಇನ್ವೆಸ್ಟ್ ಮಾಡಿದ ಬಗ್ಗೆ ರುಜುವಾತು ಪಡಿಸಲು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಬ್ಯಾಂಕ್ ಖಾತೆಯಿಂದ ನಾನು 3,30,500 ರೂಗಳನ್ನು ವಿತ್ ಡ್ರಾ ಮಾಡಿರುತ್ತೇನೆ ಎಂದರೆ ಸಾಕ್ಷಿ ನಾನು ಸದರಿ ಹಣವನ್ನು ಇನ್ವೆಸ್ಟ್ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ-11 ರ ದಾಖಲೆಯ ಪ್ರಕಾರ 2011-12 ನೇ ಇಸವಿಯಲ್ಲಿ ನನ್ನ ಬಳಿ ಕೇವಲ 8687 ರೂ ಮಾತ್ರ ಉಳಿತಾಯ ಆಗಿತ್ತು ಎಂದರೆ ಸರಿಯಲ್ಲ. ಅದೇರೀತಿ 2012-13 ನೇ ಸಾಲಿನಲ್ಲಿ ನನ್ನ ಬಳಿ ಉಳಿತಾಯ ಕೇವಲ 6550 ರೂ

ಮಾತ್ರ ಎಂದರೆ ಸುಳ್ಳು. ನಾನು ವೆಲ್ ಪಾರ್ಗೊ ಕಂಪನಿಯಲ್ಲಿ ಕೆಲಸ ಮಾಡಿದ ಬಗ್ಗೆ ಫಾರಂ-16 ಲಭ್ಯ ಇರುತ್ತದೆ ಎಂದರೆ ಸರಿ. ಫಾರಂ-16 ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಸಾಕ್ಷಿ ಮುಂದುವರೆದು ಆ ಆಧಾರದಲ್ಲಿಯೇ ನಾನು ಆದಾಯ ತೆರಿಗೆ ಪಾವತಿ ಮಾಡುತ್ತೇನೆ, ಆ ಬಗ್ಗೆ ಈಗಾಗಲೇ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ.

ನನ್ನ ಅಜ್ಜಿಯ ಹೆಸರು ಸೀತಮ್ಮ ಆಗಿರುತ್ತದೆ. 2013 ರಿಂದ 2015 ರವರೆಗೆ ನನ್ನ ಅಜ್ಜಿ ಸೀತಮ್ಮರವರು ವಾದಿ ಕೃಷ್ಣಮೂರ್ತಿರವರ ಜತೆ ಬೆಂಗಳೂರಿನಲ್ಲಿ ವಾಸ ಇದ್ದರು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನನ್ನ ಅಜ್ಜಿಗೆ ಅನಾರೋಗ್ಯ ಸಮಸ್ಯೆ ಇದೆ ಶ್ರೀ ಕೃಷ್ಣ ಸೇವಾ ಕ್ಷೇತ್ರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಹಣದ ಅವಶ್ಯಕತೆ ಇದೆ ಎಂದು ವಾದಿ ನನ್ನ ಬಳಿ ಹಣ ಕೇಳಿರುತ್ತಾರೆ ಎಂದರೆ ಸಾಕ್ಷಿ ಹಣವನ್ನು ಸಾಲದ ರೂಪದಲ್ಲಿ ಕೇಳಿರುತ್ತಾರೆ, ತಾಯಿಯ ಚಿಕಿತ್ಸೆಗೆ ಅಲ್ಲ ಎಂದು ನುಡಿಯುತ್ತಾರೆ. ನನ್ನ ಅಜ್ಜಿಯ ಚಿಕಿತ್ಸೆಗೆ ಹಣದ ಅವಶ್ಯಕತೆ ಇದ್ದು ಅದಕ್ಕೆ ನಾನು ನಿಡಿ-12 ರ ದಾಖಲೆಯಲ್ಲಿ ಕಂಡು ಬರುವಂತೆ ವಾದಿ ಕೃಷ್ಣ ಮೂರ್ತಿರವರಿಗೆ ತಲಾ 50, 60 ಮತ್ತು 70 ಸಾವಿರದಂತೆ ಹಣ ಜಮೆ ಮಾಡಿರುತ್ತೇನೆ ಎಂದರೆ ಸಾಕ್ಷಿ ಸದರಿ ಹಣವನ್ನು ನಾನು ನನ್ನ ಅಜ್ಜಿಯ ಚಿಕಿತ್ಸೆಗೆ

ಕೊಟ್ಟಿಲ್ಲ ಬದಲಾಗಿ ಸದರಿ ಹಣವನ್ನು ವಾದಿ ಸಾಲವಾಗಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಅಜ್ಜಿ ಬೆಂಗಳೂರಿನಲ್ಲಿ 2015 ರಲ್ಲಿ ಚಿಕಿತ್ಸೆ ಪಡೆಯುವ ಸಮಯದಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ವಾದಿ ಸಾಲ ಪಡೆದಿರುತ್ತಾರೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹಣವನ್ನು ವಾದಿ ನನ್ನ ಅಜ್ಜಿಯ ಚಿಕಿತ್ಸೆಗೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ನಾನು ಕೆಲಸಕ್ಕೆ ಸೇರಿದ ಸಮಯದಲ್ಲಿ ಅಂದರೆ 2007 ರಿಂದ 2015 ರವರೆಗೆ ನನ್ನ ತಂದೆ ಎಲ್ಲಿ ವಾಸ ಇದ್ದರು ಎಂದರೆ ಸಾಕ್ಷಿ ಬೀರೂರಿನಲ್ಲಿ ಎಂದು ನುಡಿಯುತ್ತಾರೆ. ನಾನು ಬೆಂಗಳೂರಿನ ಕಲ್ಯಾಣ ನಗರದಲ್ಲಿ ಬಾಡಿಗೆಗೆ ಮನೆ ಪಡೆದಿದ್ದೆ. ಮಾಸಿಕ 8 ಸಾವಿರ ರೂ ಬಾಡಿಗೆ ನೀಡುತ್ತಿದ್ದೆ. ನಾನು 2007 ರಿಂದ 2015 ರವರೆಗೆ ಬಾಡಿಗೆ ಮನೆಯಲ್ಲಿಯೇ ಇದ್ದೆ ಎಂದರೆ ಸಾಕ್ಷಿ 2007 ರಿಂದ 2010 ರವರೆಗೆ ನಾನು ನನ್ನ ಅಕ್ಕ ಶ್ರೀಲಕ್ಷ್ಮಿರವರ ಮನೆಯಲ್ಲಿ ವಾಸ ಇದ್ದೆ, ಆನಂತರ 2011 ರಿಂದ 2013 ರವರೆಗೆ ಹೈದರಾಬಾದ್ ನಲ್ಲಿ ನನ್ನ ಕಂಪನಿ ಪ್ರವೈಡ್ ಮಾಡಿದ್ದ ಗೆಸ್ಟ್‌ಹೌಸ್ ನಲ್ಲಿ ವಾಸ ಇದ್ದೆ ಎಂದು ನುಡಿಯುತ್ತಾರೆ. ನಾನು ಸುಮಾರು 2 ವರ್ಷಗಳ ಕಾಲ ಬಾಡಿಗೆ ಮನೆಯಲ್ಲಿದ್ದೆ. ನಾನು ಬಾಡಿಗೆ ಮನೆಯಲ್ಲಿದ್ದಾಗ ಮನೆಯ ಖರ್ಚುವೆಚ್ಚಗಳನ್ನು ನಾನೇ ಭರಿಸುತ್ತಿದ್ದೆ ಎಂದರೆ ಸರಿ. ಮಾಸಿಕ ಸುಮಾರು ಎಷ್ಟು ಖರ್ಚು ಬರುತ್ತಿತ್ತು ಎಂದರೆ ಸಾಕ್ಷಿ 16-17 ಸಾವಿರ

ರೂ ಎಂದು ನುಡಿಯುತ್ತಾರೆ. ನಾನು 2014 ರಲ್ಲಿ ಮದುವೆಯಾಗಿರುತ್ತೇನೆ. ಮದುವೆಯ ಸಂಪೂರ್ಣ ಖರ್ಚನ್ನು ನಾನೇ ಭರಿಸಿರುತ್ತೇನೆ. ಅಂದಾಜು 15-16 ಲಕ್ಷ ರೂ ಹಣವನ್ನು ಮದುವೆಗಾಗಿ ಖರ್ಚು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸುಮಾರು 50 ಸಾವಿರ ರೂ ಖರ್ಚು ಮಾಡಿರಬಹುದು ಎಂದು ನುಡಿಯುತ್ತಾರೆ.

ನಿಪಿ-30 ರ ದಿನಾಂಕ 30/01/2015 ರಂದು ಕ್ರಯಪತ್ರ ಮಾಡುವ ಕಾಲಕ್ಕೆ ನನ್ನ ತಂದೆ ಬೀರೂರಿನಲ್ಲಿ ವಾಸ ಇದ್ದರು ಎಂದರೆ ಸರಿ. ಆ ಸಮಯದಲ್ಲಿ ನನ್ನ ತಂದೆ ಮತ್ತು ನನ್ನ ತಂದೆಯ ಸಹೋದರರೆಲ್ಲಾರೂ ಒಟ್ಟಿಗೆ ವಾಸ ಇದ್ದರು ಎಂದರೆ ಸಾಕ್ಷಿ ನನ್ನ ತಂದೆ ಮತ್ತು 4 ನೇ ಪ್ರತಿವಾದಿ ರಾಘವೇಂದ್ರರವರು ಒಟ್ಟಿಗೆ ಬೀರೂರಿನಲ್ಲಿ ವಾಸ ಇದ್ದರು ಮತ್ತು ನನ್ನ ತಂದೆಯ ಇತರ ಸಹೋದರರು ಬೆಂಗಳೂರಿನಲ್ಲಿ ವಾಸ ಇದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ , 4 ನೇ ಪ್ರತಿವಾದಿ ರಾಘವೇಂದ್ರ ಮತ್ತು ಶ್ರೀನಿವಾಸ್ ಮೂರ್ತಿರವರು ಇದ್ದ ಸಮಯದಲ್ಲಿ ಬೀರೂರಿನ 3 ಮಳಿಗೆಗಳ ಬಾಡಿಗೆಗಳನ್ನು ತಲಾ ಒಂದೊಂದು ಮಳಿಗೆಯಂತೆ ಹಂಚಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಮಳಿಗೆಗಳ ಬಾಡಿಗೆಯನ್ನು ಶ್ರೀನಿವಾಸ್ ಮೂರ್ತಿರವರು ಪಡೆಯುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ಶ್ರೀನಿವಾಸ್ ಮೂರ್ತಿರವರ ಮರಣದ ನಂತರ ಬಾಡಿಗೆಯನ್ನು ನನ್ನ ತಂದೆ

ಪಡೆಯುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 4 ನೇ ಪ್ರತಿವಾದಿ ಪಡೆಯುತ್ತಿದ್ದರು ಎಂದು ನುಡಿಯುತ್ತಾರೆ. ವಾದಿ ವಿದ್ಯಾಭ್ಯಾಸಕ್ಕೆಂದು ಬೆಂಗಳೂರಿಗೆ ಹೋದ ನಂತರ ಅಲ್ಲಿಯೇ ಕೆಲಸ ಪಡೆದು ಅಲ್ಲೇ ವಾಸ ಇದ್ದಾರೆ ಎಂದರೆ ಸಾಕ್ಷಿ ಅವರ ವೃತ್ತಿಯ ಬಗ್ಗೆ ಗೊತ್ತಿಲ್ಲ ಆದರೆ ಅವರು ಬೆಂಗಳೂರಿನಲ್ಲಿ ವಾಸ ಇದ್ದಾರೆ ಎಂದು ನುಡಿಯುತ್ತಾರೆ. ವಾದಿ ಬೆಂಗಳೂರಿನಲ್ಲಿ ಒಂದು ಅಂಗಡಿ ಮಾಡಿಕೊಂಡು ವ್ಯಾಪಾರ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಅಂಗಡಿಯಿಂದ ಬಂದ ಆದಾಯದಲ್ಲಿ ವಾದಿ ಅವರ ಮಕ್ಕಳ ವಿದ್ಯಾಭ್ಯಾಸದ ಖರ್ಚನ್ನು ಭರಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ವಿದ್ಯಾಭ್ಯಾಸಕ್ಕೆಂದು ಶಿವಮೊಗ್ಗಕ್ಕೆ ಹೋದಾಗ ವಿದ್ಯಾಭ್ಯಾಸದ ಖರ್ಚುಗಳನ್ನು ನನ್ನ ದೊಡ್ಡಪ್ಪ ಶ್ರೀನಿವಾಸ್ ಮೂರ್ತಿ ಕೊಡುತ್ತಿದ್ದರು ಎಂದರೆ ಸರಿ. ನಿಪಿ-30 ರ ಕ್ರಯಪತ್ರವಾಗುವ ಕಾಲಕ್ಕೆ ವಾದಿ, ನನ್ನ ತಂದೆ, 4 ನೇ ಪ್ರತಿವಾದಿ ಎಲ್ಲಾರೂ ಒಟ್ಟು ಕುಟುಂಬದಲ್ಲಿದ್ದರು ಎಂದರೆ ಸಾಕ್ಷಿ ಇಲ್ಲ ನನ್ನ ತಂದೆ ಮತ್ತು 4 ನೇ ಪ್ರತಿವಾದಿ ಒಟ್ಟಿಗೆ ಇದ್ದರು, ಬೇರೆಯವರು ಬೆಂಗಳೂರಿನಲ್ಲಿ ವಾಸ ಇದ್ದರು ಎಂದು ನುಡಿಯುತ್ತಾರೆ. ನಿಪಿ-30 ರ ಕ್ರಯಪತ್ರವಾಗುವ ಕಾಲಕ್ಕೆ ಇದೇ ನ್ಯಾಯಾಲಯದಲ್ಲಿ ಓ ಎಸ್ ನಂ.25/2013 ರಂತೆ ದಾವಾ ಬಿ ಷೆಡ್ಯೂಲ್ ಆಸ್ತಿಗೆ ಸಂಬಂದಪಟ್ಟಂತೆ ನನ್ನ ದೊಡ್ಡಪ್ಪನ ಮಗ ಲಕ್ಷ್ಮೀನಾರಾಯಣರವರು ವಿಭಾಗಕ್ಕಾಗಿ ದಾವೆ ಹೂಡಿದ್ದರು ಎಂದರೆ ಸರಿ. ಓ ಎಸ್ ನಂ.25/2013 ರ ದಾವೆ ಚಾಲ್ತಿಯಲ್ಲಿರುವಾಗಲೇ ನಾನು ನಿಪಿ-30 ರಂತೆ ದಾವಾ ಎ ಷೆಡ್ಯೂಲ್

ಆಸ್ತಿಯನ್ನು ಖರೀದಿಸಿರುತ್ತೇನೆ ಎಂದರೆ ಸರಿ. ಸದರಿ ಸ್ವತ್ತನ್ನು ನಾನು ಖರೀದಿಸುತ್ತಿರುವ ವಿಚಾರ ನನ್ನ ತಂದೆಗೆ ಗೊತ್ತಿತ್ತು ಎಂದರೆ ಸರಿ. ಓ ಎಸ್ ನಂ.25/2013 ರ ದಾವೆಯಲ್ಲಿ ನಾನು ಪ್ರಸ್ತುತ ದಾವೆಯ ಎ ಷೆಡ್ಯೂಲ್ ಆಸ್ತಿಯನ್ನು ಖರೀದಿಸಿದ ವಿಚಾರವನ್ನು ನನ್ನ ತಂದೆ ಮರೆಮಾಚಿದ್ದರು ಎಂದರೆ ಸಾಕ್ಷಿ ದಾವಾ ಎ ಷೆಡ್ಯೂಲ್ ಆಸ್ತಿ ನನ್ನ ವೈಯುಕ್ತಿಕ ಎಂದು ನುಡಿಯುತ್ತಾರೆ. ಓ ಎಸ್ ನಂ.25/2013 ರ ದಾವೆ ಹೂಡುವ ಸಮಯದಲ್ಲಿ ದಾವಾ ಬಿ ಷೆಡ್ಯೂಲ್ ಆಸ್ತಿಯನ್ನುನಿರ್ವಹಿಸುತ್ತಿದ್ದದ್ದು ನನ್ನ ತಂದೆ ಮತ್ತು 4 ನೇ ಪ್ರತಿವಾದಿ ಎಂದರೆ ಸಾಕ್ಷಿ 4 ನೇ ಪ್ರತಿವಾದಿ ಮಾತ್ರ ನಿರ್ವಹಿಸುತ್ತಿದ್ದರು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಬರುತ್ತಿದ್ದ ಬಾಡಿಗೆಯನ್ನು ನನ್ನ ತಂದೆ ಮತ್ತು 4 ನೇ ಪ್ರತಿವಾದಿ ಮಾತ್ರ ಹಂಚಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ 4 ನೇ ಪ್ರತಿವಾದಿ ಬಾಡಿಗೆಯನ್ನು ಪಡೆದು ಅವರೇ ಇಟ್ಟುಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ನಿಪಿ-30 ರ ಕ್ರಯಪತ್ರ ಮಾಡಿಕೊಳ್ಳುವ ಸಮಯದಲ್ಲಿ 4 ನೇ ಪ್ರತಿವಾದಿ ನನಗೆ ಸ್ವಲ್ಪ ಹಣವನ್ನು ಕೊಟ್ಟಿರುತ್ತಾರೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ನನ್ನ ಸ್ವಂತ ಆದಾಯದಿಂದ ದಾವಾ ಎ ಷೆಡ್ಯೂಲ್ ಆಸ್ತಿ ಖರೀದಿಸಿರುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ಕುಟುಂಬಕ್ಕೆ ಬೀರೂರಿನಲ್ಲಿರುವ ದಾವಾ ಬಿ ಷೆಡ್ಯೂಲ್ ಆಸ್ತಿಯನ್ನು ಹೊರತು ಪಡಿಸಿ ಆದಾಯ ಬರುವ ಬೇರೆ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿ.

ದಾವಾ ಎ ಷೆಡ್ಯೂಲ್ ಆಸ್ತಿಯನ್ನು 49.5 ಲಕ್ಷ ರೂಗಳಿಗೆ ಖರೀದಿಸಿರುತ್ತೇನೆ. ಸದರಿ ಆಸ್ತಿಯನ್ನು 28 ಲಕ್ಷ ರೂ ಲೋನ್ ಪಡೆದು ಮತ್ತು ನನ್ನ ಉಳಿತಾಯದಿಂದ ಸದರಿ ಸ್ವತ್ತನ್ನು ಖರೀದಿಸಿರುತ್ತೇನೆ. 2007 ರಿಂದ 2015 ರವರೆಗಿನ ನನ್ನ ಒಟ್ಟು ಆದಾಯ 20 ಲಕ್ಷ ರೂ ಆಗುವುದಿಲ್ಲ ಎಂದರೆ ಸಾಕ್ಷಿ 2007 ರಿಂದ 2015 ರವರೆಗಿನ ನನ್ನ ಒಟ್ಟು ಆದಾಯ 32.5 ಲಕ್ಷ ರೂ ಎಂದು ನುಡಿಯುತ್ತಾರೆ. ಮೇಲ್ಕಂಡ ಸಮಯದಲ್ಲಿ ನನಗೆ 32.5 ಲಕ್ಷ ರೂ ಆದಾಯ ನನಗೆ ಇರಲಿಲ್ಲ ನಾನು ಬ್ಯಾಂಕಿನಿಂದ ಪಡೆದ 28 ಲಕ್ಷ ರೂ ಸಾಲ ಬಿಟ್ಟು ಉಳಿಕೆ 20 ಲಕ್ಷ ರೂ ಹಣವನ್ನು ನನ್ನ ತಂದೆಯವರು ಬೀರೂರಿನಲ್ಲಿದ್ದ ದಾವಾ ಬಿ ಷೆಡ್ಯೂಲ್ ಆಸ್ತಿಯಿಂದ ಬಂದಂತಹ ಬಾಡಿಗೆ ಹಣದ ಮೊತ್ತ ಆಗಿರುತ್ತದೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ದಾವಾ ಎ ಷೆಡ್ಯೂಲ್ ಆಸ್ತಿಯಲ್ಲಿ ಭಾಗ ಕೊಡಬೇಕಾಗುತ್ತದೆ ಎಂಬ ಕಾರಣದಿಂದ ನನ್ನ ತಂದೆ ದಾವಾ ಎ ಷೆಡ್ಯೂಲ್ ಆಸ್ತಿಯನ್ನು ನನ್ನ ಮತ್ತು ನನ್ನ ತಾಯಿ ಹೆಸರಿನಲ್ಲಿ ನನ್ನ ತಂದೆ ಖರೀದಿಸಿರುತ್ತಾರೆ ಎಂದರೆ ಸುಳ್ಳು. ದಾವಾ ಎ ಷೆಡ್ಯೂಲ್ ಆಸ್ತಿಯು ಒಟ್ಟು ಕುಟುಂಬದ ಆಸ್ತಿಯಾಗಿದ್ದು ಅದರಲ್ಲಿಯೂ ಸಹ ವಾದಿಗೆ ಹಕ್ಕು ಅಧಿಕಾರ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ನನ್ನ ಸ್ವಂತ ಸಂಪಾದನೆಯಿಂದ ಗಳಿಸಿದ ಆಸ್ತಿ ಅದು ನನಗೆ ಮಾತ್ರ ಸೇರಬೇಕು ಎಂದು ನುಡಿಯುತ್ತಾರೆ. ನಾನು ದುಡಿಮೆ ಮಾಡುತ್ತಿದ್ದ ಹಣ ನನ್ನ ಖರ್ಚುವೆಚ್ಚಕ್ಕೆ ಮಾತ್ರ ಸಾಕಾಗುತಿದ್ದು ಯಾವುದೇ ಉಳಿತಾಯ

ಆಗುತ್ತಿರಲಿಲ್ಲ ಎಂದರೆ ಸಾಕ್ಷಿ ಉಳಿತಾಯ ಆಗುತ್ತಿದ್ದು ಆದರೆ ಬಗ್ಗೆ ನಾನು ಬ್ಯಾಂಕ್ ಸ್ಟೇಟ್ಮೆಂಟ್ ಮತ್ತು ಐಟಿ ರಿಟರ್ನ್ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಓ ಎಸ್ ನಂ. 25/2013 ರ ದಾವೆ 2019 ರಲ್ಲಿ ತೀರ್ಪಾಗಿರುತ್ತದೆ ಎಂದರೆ ಸರಿ. ಸದರಿ ದಾವೆ ತೀರ್ಪು ಆಗುವ ಪೂರ್ವದಲ್ಲಿಯೇ ನಾನು ದಾವಾ ಎ ಷೆಡ್ಯೂಲ್ ಆಸ್ತಿಯನ್ನು ಖರೀದಿಸಿರುತ್ತೇನೆ ಎಂದರೆ ಸರಿ. ದಾವಾ ಎ ಷೆಡ್ಯೂಲ್ ಆಸ್ತಿ ಒಟ್ಟು ಕುಟುಂಬದ ಆಸ್ತಿಯಾಗಿದ್ದು ಅದರಲ್ಲಿ ವಾದಿಗೂ ಸಹ ಹಿಸ್ಸೆ ಇದೆ ಎಂದರೆ ಸರಿಯಲ್ಲ. ದಾವಾ ಎ ಷೆಡ್ಯೂಲ್ ಆಸ್ತಿಯನ್ನು ಖರೀದಿಸುವಷ್ಟು ಆರ್ಥಿಕ ಸಾಮರ್ಥ್ಯ ನನಗೆ ಇರಲಿಲ್ಲ, ಅದನ್ನು ಒಟ್ಟು ಕುಟುಂಬದ ಆದಾಯದಿಂದಲೇ ಖರೀದಿಸಲಾಗಿದೆ ಎಂದರೆ ಸುಳ್ಳು. ವಾದಿಗೆ ಭಾಗಕೊಡಬೇಕಾಗುತ್ತದೆ ಎಂಬ ಕಾರಣದಿಂದ ನನ್ನ ತಂದೆ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯ ನುಡಿದಿರುವುದಿಲ್ಲ ಎಂದರೆ ಸಾಕ್ಷಿ ಅವರಿಗೆ ಅನಾರೋಗ್ಯ ಸಮಸ್ಯೆ ಇರುವುದರಿಂದ ಅವರು ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯ ನುಡಿದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳಲ್ಲಿ ವಾದಿಗೆ ಹಿಸ್ಸೆ ನೀಡುವುದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.